ಕೇಳುವುದೇನೆಂದರೆ, ಈ ರೀತಿಯ ಘಟನೆ ತಮ್ಮ ಗಮನಕ್ಕೆ ಬಂದಿದ್ದರೆ, ದಯವಿಟ್ಟು ಜಿಲ್ಲಾಧಿಕಾರಿಗಳಿಂದ ತನಿಖೆ ನಡೆಸಿ ಇದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವುದು ಸೂಕ್ತವೆಂದು ತಮ್ಮಲ್ಲಿ ಏನಂತಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಅಂತಹದೇನಾದರೂ ನಡೆದಿದ್ದಲ್ಲಿ, ಡಿ.ಸಿ. ಯವರಿಂದ ವರದಿ ತರಿಸಿಕೊಳ್ಳುವ ಅವಶ್ಯಕತೆ ಇದ್ದರೆ ಖಂಡಿತಾ ತರಿಸಿಕೊಳ್ಳಲಾಗುವುದು.

ಶ್ರೀ ಜೆ.ವಿ. ಸಿದ್ದಪ್ಪ : ಆ ಗ್ರಾಮಕ್ಕೆ ನಿನ್ನೆ ನಾನೆ ಹೋಗಿದ್ದೇನೆ, ಅಂತಹ ಘಟನೆ ಯಾವುದು ಆಗಿಲ್ಲ. ಎಸ್.ಪಿ.ಯವರ ಜೊತೆಯಲ್ಲಿ ಬೆಳಿಗ್ಗೆ 7 ಗಂಟೆಗೆ ಹೋಗಿ ರಾತ್ರಿ 11 ಗಂಟೆಯವರೆಗೆ ಇದ್ದೆ, ಹೆಣ್ಣು ಮಕ್ಕಳು ಪೊಲೀಸ್‌ನವರನ್ನು ಹೊಡೆಯಲು ಬಂದರೆ ಹೊರತು ಪೊಲೀಸ್‌ನವರು ಯಾವ ರೀತಿಯ ದೌರ್ಜನ್ಯವನ್ನೂ ಮಾಡಿಲ್ಲ. ಪೊಲೀಸ್‌ನವರು ಅರಸಿಕೆರೆಗೆ ಬಂದಾದ ಮೇಲೆ ಬಸ್ ಅನ್ನು ಸುಡಲಾಗಿದೆಯೇ ಹೊರತು ಅವರು ಅಲ್ಲಿರುವಾಗ ಸುಟ್ಟಿಲ್ಲ. ಬಸ್‌ನಿಂದ ಇಳಿದ ಹೆಣ್ಣುಮಕ್ಕಳು ಹಾಗೂ ಇತರ ಇಂತಿಂಥವರ ಬಸ್ ಅನ್ನು ಸುಟ್ಟಿದ್ದಾರೆಂದು ದೂರನ್ನು ಕೊಟ್ಟಿದ್ದಾರೆ, ಇವತ್ತು ಸಂಜೆ ದಸ್ತಗಿರಿ ಮಾಡುವ ಹಂತದಲ್ಲಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಗಲಾಟೆ ನಿಮ್ಮ ಸಮಕ್ಷಮದಲ್ಲಿ ಆಗಿರುವುದೇ?

ಶ್ರೀ ಜೆ.ವಿ. ಸಿದ್ದಪ್ಪ : ಗಲಾಟೆಯಾದ ಮೇಲೆ ಹೋದೆನು, ಆ ಹಳ್ಳಿಯಲ್ಲಿರುವ ಜನರೆಲ್ಲಾ ನಮ್ಮವರೆ.

(7) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ.

(ಅ) ಮಾನ್ಯ ಸದಸ್ಯರಾದ ಶ್ರೀ ಬಿ. ಸೋಮಶೇಖರ್ ರವರ ಮೇಲೆ ವಿಧಾನ ಪರಿಷತ್ತಿನಲ್ಲಿ ಮಾಡಿರುವ ಆರೋಪಗಳ ಬಗ್ಗೆ.

+ಶ್ರೀ ಬಿ. ಸೋಮಶೇಖರ್ : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ: 21-3-2001 ರಂದು ವಿಧಾನ ಪರಿಷತ್ತಿನಲ್ಲಿ ಆ ಸದನದ ಒಬ್ಬ ಸದಸ್ಯರು ಪ್ರಶ್ನೆಯನ್ನು ಹಾಕಿ ವೈಯಕ್ತಿಕವಾಗಿ ನನ್ನ ಹೆಸರನ್ನು ಉಲ್ಲೇಖ ಮಾಡಿ ಇಲ್ಲದ ಸಲ್ಲದ ಆರೋಪಗಳನ್ನು ಮಾಡಿ, ಆ ಬಗ್ಗೆ ದೀರ್ಘವಾಗಿ ಚರ್ಚೆಯಾಗಿ ಆ ಬಗ್ಗೆ ಸಹಕಾರ ಮಂತ್ರಿಗಳು ಸಿಓಡಿ ತನಿಖೆ ಮಾಡುತ್ತೇನೆಂದು ಹೇಳಿರುವುದು ಇವತ್ತು ಪತ್ರಿಕೆಗಳೆಲ್ಲಾ ನನ್ನ ಚಾರಿತ್ರವಧೆ ಮಾಡುವ ರೀತಿಯಲ್ಲಿ ಬಂದಿದೆ. ಅದಾದ ನಂತರ ಆ ವಿಚಾರವನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದಕ್ಕೆ ಇವತ್ತು ಆ ಒಂದು ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ನನ್ನ ವೈಯಕ್ತಿಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆ ಸದನದಲ್ಲಿ ಸಹಕಾರ ಮಂತ್ರಿಗಳು ಇವತ್ತು ಉತ್ತರ ಕೊಟ್ಟಿದ್ದಾರೆ, ಇಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ಸಹಕಾರ ಸಚಿವರು ಸದನದಲ್ಲಿದ್ದರೆ ಚೆನ್ನಾಗಿರುತ್ತದೆ, ಅವರನ್ನು ಕರೆಯಿಸಬೇಕು, ಈ ಬಗ್ಗೆ ಅಧ್ಯಕ್ಷರು, ನಿನ್ನೆ ಮೊನ್ನೆಯೇ ಅವರಿಗೆ ಹೇಳಿದ್ದಾರೆ, ಸಹಕಾರ ಮಂತ್ರಿಗಳು ಬಂದು ಸ್ವಲ್ಪ ಸಹಕಾರ ಮಾಡಬೇಕು, ಇದು ನನ್ನ ಒಬ್ಬನ ಪ್ರಶ್ನೆಯಲ್ಲ, ನಾಳೆ ಇವರ ಮೇಲೂ ಬರಬಹುದು.

ಅಧ್ಯಕ್ಷರು : ಸೋಮಶೇಖರ್‌ರವರೆ, ಅವರಿಗೆ ಹೇಳಿಕೆಕಳುಹಿಸಲಾಗಿದೆ. ಬಂದ ಮೇಲೆ ಮಾತನಾಡಿ, ಅಲ್ಲಿಯವರೆಗೆ ಬೇರೆ ಸದಸ್ಯರು ಮಾತನಾಡುತ್ತಾರೆ.

(ಆ) ಭದ್ರಾವತಿಯಲ್ಲಿನ ಎಂ.ಪಿ.ಎಂ. ಕಾರ್ಖಾನೆಗೆ ಬೆಂಕಿ ಬಿದ್ದಿರುವ ಬಗ್ಗೆ.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : ಉಸ್ತುವಾರಿ ಸಚಿವರು ಹಾಗೂ ಗೃಹ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ, ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಎಂ.ಪಿ.ಎಂ. ಕಾರ್ಖಾನೆಗೆ ಬೆಂಕಿಬಿದ್ದು ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ, ಆ ಬಗ್ಗೆ ಹೇಳಿಕೆ ನೀಡಿದರೆ ಒಳ್ಳೆಯದು.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಅಲ್ಲಿ ಎಂ.ಪಿ.ಎಂ. ಕಾರ್ಖಾನೆಯಲ್ಲಿ ಬೊಗಸ್ ಸ್ಟಾಕ್ ಇತ್ತು ಅದಕ್ಕೆ ಬೆಂಕಿ ಬಿದ್ದು ನಷ್ಟವಾಗಿದೆ. ಈಗ ನನಗೆ ಬಂದ ವರದಿಯ ಪ್ರಕಾರ ಸುಮಾರು ಒಂದು ಲಕ್ಷ ಟನ್‌ನಷ್ಟು ಬೊಗಾಸ್ ಸುಟ್ಟುಹೋಗಿದೆ ಆದರೆ ಅದರ ಬೆಲೆ ಗೊತ್ತಿಲ್ಲ. ಎಸ್.ಪಿ. ಯವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಆಲಮಟ್ಟಿಯಲ್ಲಿದ್ದಾರೆ. ಡಿ.ಸಿ. ಯವರೂ ಕೂಡ ಅಲ್ಲಿದ್ದಾರೆ. ಕರಾರುವಕ್ಕಾಗಿ ಮಾಹಿತಿಯನ್ನು ಪಡೆದುಕೊಂಡು ನಾಳೆ ಸದನದಲ್ಲಿ ಹೇಳಿಕೆ ನೀಡಲಾಗುವುದು.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : ಅದು ಲಾಭದಲ್ಲಿರುವಂಥ ಒಂದು ಒಳ್ಳೆ ಸಂಸ್ಥೆ. ಇತ್ತೀಚೆಗೆ ಅದನ್ನು ಖಾಸಗೀಕರಣ ಮಾಡುತ್ತಾರೆಂದು ದಿನ ಬೆಳಿಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ. ಪಾಂಡವಪುರದಲ್ಲಿನ ಸಕ್ಕರೆ ಕಾರ್ಖಾನೆಗೂ ಬೆಂಕಿ ಬಿತ್ತು. ಅಂದರೆ ಈ ರೀತಿ ಯಾವ ಕಾರಣದಿಂದ ಬೆಂಕಿ ಬಿತ್ತು ಎಂಬುದು ಗೊತ್ತಾಗಬೇಕು. ಏತಕ್ಕೆ ಬಿತ್ತು. ಹೇಗೆ ಬಿತ್ತು ಎಂಬುದನ್ನು ಸದನಕ್ಕೆ ತಿಳಿಸಬೇಕು. ಅಲ್ಲಿರುವುದೆಲ್ಲಾ ನಮ್ಮ ಸರ್ಕಾರದ ಹಣ.

(ಇ) ಕರ್ನಾಟಕ ಕೈಮಗ್ಗ ನಿಗಮದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಮಗ್ಗದ ನಿಗಮದಲ್ಲಿ ಸುಮಾರು 6-8 ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿ ಹಣ ದುರುಪಯೋಗವಾಗಿದೆ ಎಂದು ಸುದ್ದಿ ಇದೆ. ಅದರಲ್ಲಿ ಮುಂಗಡ ಹಣ ಕೊಟ್ಟಿರುವುದು, ಎಳೆಗಳಿಗೆ ಗಂಜಿ ಹಾಕುವುದು, ರಸಾಯನಿಕ ಪದಾರ್ಥಗಳನ್ನು ಕೊಟ್ಟಿರುವುದು ಹಾಗೂ ಒಂದೇ ಬಿಲ್ಲಿಗೆ ಎರಡು ಸಾರಿ ಹಣ ಪಾವತಿ ಮಾಡಿರುವುದು, ಅಲ್ಲಿರುವ ಅಧಿಕಾರಿಗಳು ಶಾಮೀಲಾಗಿರುವುದರಿಂದ ಕಳೆದ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದು ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ. ಸುದ್ದಿಯನ್ನು ತಿಳಿದು ಮಂತ್ರಿಗಳೂ ಕೂಡ ಆ ಕೈಮಗ್ಗ ನಿಗಮಕ್ಕೆ ಈ ರೀತಿಯ ಅವ್ಯವಹಾರದ ಬಗ್ಗೆ ವಿಚಾರಣೆಯಾಗಬೇಕೆಂದು ಪತ್ರವನ್ನೂ ಕೂಡ ಬರೆದಿದ್ದಾರೆ. ಈಗಾಗಲೇ ಸರ್ಕಾರದ ಕೈಮಗ್ಗ ನಿಗಮ ನಷ್ಟದಲ್ಲಿದೆ. ಈ ಬಗ್ಗೆ ಸಿಓಡಿ ತನಿಖೆಯಾಗಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

+ **ಶ್ರೀ ಎಂ. ಮಹಾದೇವ (ರೇಷ್ಮೆ ಸಚಿವರು) :** ಮಾನ್ಯ ಸದಸ್ಯರು ಹೇಳಿದಂತೆ ಕೆಲವು ಅಕ್ರಮವಾಗಿರುವುದು ನಿಜ. ಬಹುಶಃ ನಾನು ಅಲ್ಲಿ ಅಧ್ಯಕ್ಷನಾದ ಮೇಲೆ ಆ ಬಗ್ಗೆ ಕೂಲಂಕುಷವಾಗಿ